## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶೈಕ್ಷಣಿಕವಾಗಿ ಹಿಂದುಳಿದಿರುವ 74 ಬ್ಲಾಕ್‌ಗಳಲ್ಲಿನ [19 ಜಿಲ್ಲೆಗಳ] ತರಗತಿ 6 ರಿಂದ 7 ರ ಸರ್ಕಾರಿ ಶಾಲಾ ಮಕ್ಕಳಿಗೆ ಈಗ ನೀಡುತ್ತಿರುವ ಅಕ್ಕಿಯ ಪ್ರಮಾಣ 100ಗ್ರಾಂ ನಿಂದ 150 ಗ್ರಾಂಗೆ ಹೆಚ್ಚಿಸುವ ಕುರಿತು.

ಓದಲಾಗಿದೆ:- 1.ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 5A(U.Pry.)/2007-Desk(MDM) ದಿನಾಂಕ: 08-10-2007.

2.ಸಹ ನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ ರವರ ಪತ್ರ ಸಂಖ್ಯೆ: ಎಂ 1.ಅ.ದಾ.ಆಹಾರ ಬೇಡಿಕೆ.19/07-08/ದಿನಾಂಕ: 23-10-2007.

*********

ಪ್ರಸ್ತಾವನೆ:-

ಮೇಲೆ (1) ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಲ್ಲಿ ಕೇಂದ್ರ ಸರ್ಕಾರವು 19 ಜಿಲ್ಲೆಗಳ, ಶೈಕ್ಷಣಿಕವಾಗಿ ಹಿಂದುಳಿದ 74 ಬ್ಲಾಕ್‌ಗಳಲ್ಲಿನ ತರಗತಿ 6 ರಿಂದ 7 ರ ಸರ್ಕಾರಿ ಶಾಲಾ ಮಕ್ಕಳಿಗೆ ಈಗ ಪ್ರತಿ ಮಕ್ಕಳಿಗೆ ನೀಡುತ್ತಿರುವ ಅಕ್ಕಿಯ ಪ್ರಮಾಣ 100 ಗ್ರಾಂ ನಿಂದ 150 ಗ್ರಾಂಗೆ 1ನೇ ಅಕ್ಟೋಬರ್ 2007 ರಿಂದ 31-03-2008 ರವರೆಗಿನ ಅವಧಿಗೆ ಜಾರಿಗೆ ಬರುವಂತೆ ಹೆಚ್ಚಿಸಿದೆ, ಅದಕ್ಕಾಗಿ ಆಹಾರ ಧಾನ್ಯಗಳನ್ನು ಒದಗಿಸಿದೆ.

ಮೇಲೆ (2) ರಲ್ಲಿ ಓದಲಾದ ಸಹ ನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ ರವರ ಪತ್ರದಲ್ಲಿ ಕೇಂದ್ರ ಸರ್ಕಾರವು 1ನೇ ಅಕ್ಟೋಬರ್ 2007 ರಿಂದ ಜಾರಿಗೆ ಬರುವಂತೆ 19 ಜಿಲ್ಲೆಗಳ, ಶೈಕ್ಷಣಿಕವಾಗಿ ಹಿಂದುಳಿದ 74 ಬ್ಲಾಕ್‌ಗಳಲ್ಲಿನ ತರಗತಿ 6 ರಿಂದ 7 ರ ಸರ್ಕಾರಿ ಶಾಲಾ ಮಕ್ಕಳಿಗೆ ಈಗ ಪ್ರತಿ ಮಗುವಿಗೆ ನೀಡುತ್ತಿರುವ ಅಕ್ಕಿಯ ಪ್ರಮಾಣ 100 ಗ್ರಾಂ ನಿಂದ 150 ಗ್ರಾಂಗೆ ಹೆಚ್ಚಿಸಿ ಆಹಾರ ಧಾನ್ಯಗಳನ್ನು ಒದಗಿಸಿರುವ ಹಿನ್ನೆಲೆಯಲ್ಲಿ, ಸರ್ಕಾರ ಅದೇ ರೀತಿ ಶಾಲೆಗಳಿಗೆ ಸರಬರಾಜು ಮಾಡಲು ಸರ್ಕಾರದ ಆದೇಶವನ್ನು ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಇಡಿ:75 ಎಂ.ಎಂ.ಎಸ್ 2007 ಬೆಂಗಳೂರು,**
**ದಿನಾಂಕ 23ನೇ ನವೆಂಬರ್ 2007**
**[ಇಡಿ: 165 :ಸ್ವೀಮರ (ಯುನಿಕ್) ಬೆಂಗಳೂರು ದಿನಾಂಕ 27-11-2007]**

2007-08 ನೇ ಸಾಲಿನ ಅಕ್ಟೋಬರ್ 1 ರಿಂದ ಜಾರಿಗೆ ಬರುವಂತೆ 19 ಜಿಲ್ಲೆಗಳ, ಶೈಕ್ಷಣಿಕವಾಗಿ ಹಿಂದುಳಿದ 74 ಬ್ಲಾಕ್‌ಗಳಲ್ಲಿನ ತರಗತಿ 6 ರಿಂದ 7 ರ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಈಗ ಪ್ರತಿ ಮಗುವಿಗೆ ನೀಡುತ್ತಿರುವ ಅಕ್ಕಿಯ ಪ್ರಮಾಣ 100 ಗ್ರಾಂ ನಿಂದ 150 ಗ್ರಾಂಗೆ ಹೆಚ್ಚಿಸಿ ಆದೇಶಿಸಿದೆ.

260

ಅದರನ್ವಯ, ಅದೇ ಪ್ರಮಾಣದಲ್ಲಿ ಮೇಲ್ಕಂಡ 19 ಜಿಲ್ಲೆಗಳ ಶೈಕ್ಷಣಿಕವಾಗಿ ಹಿಂದುಳಿದಿರುವ 74 ಬ್ಲಾಕ್‌ಗಳಲ್ಲಿನ ತರಗತಿ 6 ರಿಂದ 7 ರ ಸರ್ಕಾರಿ ಹಾಗೂ ಅನುದಾನಿತ ಶಾಲಾ ಮಕ್ಕಳಿಗೆ ಈಗ ಪ್ರತಿ ಮಗುವಿಗೆ ನೀಡುತ್ತಿರುವ ಅಕ್ಕಿಯ ಪ್ರಮಾಣ 100 ಗ್ರಾಂ ನಿಂದ 150 ಗ್ರಾಂ ಅಕ್ಕಿಯನ್ನು ಸರಬರಾಜು ಮಾಡಲು ಮತ್ತು ಕೇಂದ್ರ ಸರ್ಕಾರವು ವಿಧಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸುವ ನಿಬಂಧನೆಗಳಿಗೊಳ ಪಟ್ಟು ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ರವರಿಗೆ ಸರ್ಕಾರವು ಅನುಮತಿ ನೀಡಿದೆ.

ಭಾರತ ಸರ್ಕಾರ ರಾಷ್ಟ್ರಪತಿಗಳ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಎಂ.ಎಂ. ಹಿರೇಮಠ್)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ.

ಗೆ:-

1. ಮಹಾಲೇಖಪಾಲರು, ಕರ್ನಾಟಕ (ಆಡಿಟ್ 1 ಮತ್ತು 2), ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಸಹ ನಿರ್ದೇಶಕರು [ಮಧ್ಯಾಹ್ನ ಉಪಹಾರ ಯೋಜನೆ] ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ನಿರ್ದೇಶಕರು, ಖಜಾನಾ ನಿರ್ದೇಶನಾಲಯ, ಬೆಂಗಳೂರು
5. ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
6. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು
7. ಉಪನಿರ್ದೇಶಕರು, ಖಜಾನಾ ಗಣಕ ಕೇಂದ್ರ, ನಂ.49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿ, [ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ] ಶಿಕ್ಷಣ ಇಲಾಖೆ ರವರ ಆಪ್ತ ಕಾರ್ಯದರ್ಶಿ
9. ಸಾಪ್ತಾಹಿಕ ರಾಜ್ಯ ಪತ್ರ
10. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು